

# ಹಟ ಇದ್ದರೆ ಗೆಲ್ಲಬಹುದು

## ಗುರುಮೂರ್ತಿ ಹೆಗಡೆ

ಕಲರ್ಸ್ ಕನ್ನಡದ 'ಪದ್ಮಾವತಿ' ಸಂಕಲನಕಾರ

★ *ಏನಾಗಬೇಕು ಅಂದುಕೊಂಡಿದ್ರಿ?*

ಬೆಂಗಳೂರಿಗೆ ದೇವಸ್ಥಾನದ ಅರ್ಚಕ ಆಗಲು ಬಂದಿದ್ದೆ. ಆದರೆ ನಿರೀಕ್ಷೆ ಮೀರಿದ ಬೆಳವಣಿಗೆಯನ್ನು ಸಾಧಿಸಿದ್ದೇನೆ ಎನ್ನುವ ಆತ್ಮತೃಪ್ತಿ ಇದೆ. ಇದೇ ಮಾಡಬೇಕು ಎನ್ನುವ ಬಯಕೆ ಇರಲಿಲ್ಲ. ಬದುಕಿಗಾಗಿ ಕೆಲಸ ಹುಡುಕುವುದು ಅನಿವಾರ್ಯವಾಗಿತ್ತು. ಸ್ವಲ್ಪ ದಿನ ಪೇಯಿಂಗ್ ಗೆಸ್ಟ್ ವ್ಯವಸ್ಥಾಪಕನಾಗಿದ್ದೆ. ಮಾರ್ಕೆಟಿಂಗ್ ಏಜೆಂಟಾಗಿ ಸುತ್ತಾಡಿದೆ. ಅಷ್ಟರಲ್ಲಿ ನನ್ನ ಸಂಬಂಧಿ, ನಿರ್ಮಾಪಕ ಗಣಪತಿ ಭಟ್ ತಮ್ಮ ಎಡಿಟಿಂಗ್ ಸ್ಟುಡಿಯೋದಲ್ಲಿ ಕೆಲಸ ಮಾಡುವಂತೆ ತಿಳಿಸಿದರು. ಒಂದು ವರ್ಷದ ಅವಧಿಯಲ್ಲಿ ಹಗಲು ರಾತ್ರಿ ಎನ್ನದೆ ಎಡಿಟಿಂಗ್ ಕಲಿತೆ. ಆತನಕ ಕಂಪ್ಯೂಟರ್ ಮುಟ್ಟದ ನಾನು ಒಂದೇ ವರ್ಷದಲ್ಲಿ ಸ್ವತಂತ್ರ ಸಂಕಲನಕಾರನಾಗಿ ರೂಪಿತನಾದೆ. ಇದುವರೆಗೆ ಐದಾರು ಧಾರಾವಾಹಿ, ಐವತ್ತಕ್ಕೂ ಹೆಚ್ಚು ಕಿರು ಚಿತ್ರಗಳಿಗೆ ಸಂಕಲನ ಮಾಡಿದ್ದೇನೆ. ಒಂದೆರಡು ಸಿನಿಮಾಗಳಲ್ಲಿಯೂ ಮಾಡಿದ್ದೇನೆ. ಈ ನನ್ನ ಎಲ್ಲಾ ಕೆಲಸಕ್ಕೂ ಪ್ರೇರಕ ಶಕ್ತಿಯಾಗಿದ್ದು ನನ್ನ ತಂದೆ. ಕೆಲಸ ಆರಂಭಿಸುವಾಗ ವಿಫಲನಾದರೆ ಎನ್ನುವ ಪ್ರಶ್ನೆ ಕಾಡಿದಾಗ ನನ್ನ ಅಪ್ಪ 'ಪ್ರಯತ್ನ ಮಾಡು, ಯಶಸ್ಸು ನಿನ್ನ ಶ್ರಮದ ಮೇಲಿದೆ. ವಿಫಲ ಆದರೂ ಮನೆ, ತೋಟ ಎಲ್ಲಾ ಇದೆ ಯಾಕೆ ಚಿಂತೆ' ಅಂದರು. ಎಲ್ಲರಿಗೂ ಸಾಧ್ಯವಾಗುವುದು ನನಗೆ ಏಕೆ ಸಾಧ್ಯ ಇಲ್ಲ ಎನ್ನುವ ಸವಾಲಿನಿಂದ ಶ್ರಮವಹಿಸಿ ಕಲಿತು ಬದುಕು ನಿರ್ಮಿಸಿಕೊಂಡೆ.

★ *ಸಿನಿಮಾ ಮತ್ತು ಧಾರಾವಾಹಿ ಸಂಕಲನಕ್ಕೆ ವ್ಯತ್ಯಾಸವೇನು?*

ಧಾರಾವಾಹಿಯಲ್ಲಿ ಪ್ರಸಾರವಾಗುವ ಹಂತದವರೆಗೂ ನಮ್ಮದೇ ಕೈಚಳಕ ಇರುತ್ತದೆ. ಧಾರಾವಾಹಿಯಲ್ಲಿ ಗ್ರಾಫಿಕ್, ಸಂಗಿತ, ಸಂಚಾರ ದೃಶ್ಯ, ಹಿನ್ನೆಲೆಗೆ ಅಗತ್ಯ ಅನ್ನಿಸುವ ದೃಶ್ಯಗಳನ್ನೆಲ್ಲಾ ಹಾಕುತ್ತೇವೆ. ಸಿನಿಮಾದಲ್ಲಿ ಹಾಗೆ ಆಗುವುದಿಲ್ಲ. ಕೆಲಸ ತುಂಬಾ ಸೀಮಿತ. ಸೀರಿಯಲ್ ಹೆಚ್ಚು ಖುಷಿ ಕೊಡುತ್ತದೆ. ಸಿನಿಮಾದಲ್ಲಿ ಕೆಲಸ ದೀರ್ಘಾವಧಿ ತೆಗೆದುಕೊಳ್ಳುತ್ತದೆ. ನನಗೆ ಅನ್ನಿಸಿದಂತೆ ಸಂಭಾವನೆಯೂ ಧಾರಾವಾಹಿಯಲ್ಲೇ ಹೆಚ್ಚು ಸಿಗುತ್ತಿದೆ.

★ *ನಿಮಗೆ ಸಂಕಲನ ರೂಢಿಯಾಗಿದ್ದು ಹೇಗೆ?*

ಸಂಕಲನ ತಾಂತ್ರಿಕ ಕೆಲಸ; ಆದರೂ ಪಕ್ಕಾ ಸೃಜನಶೀಲ ಕ್ರಿಯೆ. ನಾನು ಹೆಚ್ಚಿನ ವಿದ್ಯಾಭ್ಯಾಸ ಮಾಡಿದವನಲ್ಲ. ಆದರೆ ಸಂಗೀತದ ಬಗ್ಗೆ ಆಸಕ್ತಿಯಿತ್ತು. ಚಿತ್ರಗಳನ್ನು ಬರೆಯುವ ಹವ್ಯಾಸ ಇತ್ತು. ಸರ್ವಶಿಕ್ಷಣ ಅಭಿಯಾನದ ಯೋಜನೆಯಲ್ಲಿ ಸುಮಾರು 20 ಶಾಲೆಗಳಿಗೆ ಗೋಡೆಗಳ ಮೇಲೆ ಚಿತ್ರಗಳನ್ನು ಬಿಡಿಸಿದ್ದೆ. ಅದು ಇಲ್ಲಿ ನನಗೆ ಕೈಹಿಡಿಯಿತು ಅನ್ನಿಸುತ್ತದೆ. ಯಶಸ್ವಿಯಾಗಬೇಕು ಎಂದರೆ ವೈವಿಧ್ಯವಾಗಿ ಯೋಚಿಸುವುದೇ ಮುಖ್ಯ. ಏಕಕಾಲದಲ್ಲಿ ಎರಡು ಧಾರಾವಾಹಿಗಳನ್ನು ಸಂಕಲನ ಮಾಡುವುದು ಸುಲಭದ ಮಾತಲ್ಲ. ನಾನು 'ಅಗ್ನಿಸಾಕ್ಷಿ' 'ಪದ್ಮಾವತಿ' ಎರಡನ್ನೂ ಸಂಕಲಿಸುತ್ತಿದ್ದೇನೆ. ಪದ್ಮಾವತಿಗೆ ಅತ್ಯುತ್ತಮ ಸಂಕಲನಕಾರ ಎಂದು 'ಅನುಬಂಧ' ಪುರಸ್ಕಾರ ಸಿಕ್ಕಿದೆ. ಬಿಗ್‌ಬಾಸ್ ಮುಗಿದ ತಕ್ಷಣ ಹೊಸ ಧಾರಾವಾಹಿ ಬರಲಿದೆ. ಅದನ್ನೂ ನಾನೇ ಸಂಕಲಿಸುವ ಸಾಧ್ಯತೆ ಇದೆ.

★ *ಹೊಸಬರಿಗೆ ಎಲ್ಲಿ ಹೆಚ್ಚು ಅವಕಾಶಗಳಿವೆ?*

ತೆರೆ ಹೆಚ್ಚು ಆಕರ್ಷಿಸುತ್ತದೆ. ವಿಶೇಷ ಅಭಿನಯ ಕೌಶಲ್ಯವಿದ್ದು, ಮೊದಲ ಅವಕಾಶದಲ್ಲಿ ಯಶಸ್ಸು ಸಿಕ್ಕರೆ ತೆರೆಯ ಮೇಲೆ ಮಿಂಚಬಹುದು. ಸಾಧಾರಣ ಎನ್ನುವಂತಿದ್ದರೆ ತೆರೆಯ ಹಿಂದೆ ಅವಕಾಶಗಳು ಹೆಚ್ಚಿವೆ. ಸಂಕಲನ ಆಗಬಹುದು ಕ್ಯಾಮೆರಾ ಆಗಬಹುದು, ಪಕ್ಕಾ ಕೆಲಸ ಕಲಿತರೆ ಬಿಡುವು ಇರದಷ್ಟು ಕೆಲಸಗಳು ಇವೆ. ಸಂಪಾದನೆಗೆ ಕೊರತೆ ಆಗುವುದಿಲ್ಲ ಎನ್ನುವುದು ನನ್ನ ಅನುಭವ.

★ *ಬೇರೆ ಏನು ಮಾಡುತ್ತಿದ್ದೀರಿ?*

ಈ ಹಿಂದೆ 25 ಯುವಕರಿಗೆ ಸಂಕಲನವನ್ನು ಕಲಿಸಿದ್ದೆ. ಈಗ ಅದನ್ನು ಸ್ವಲ್ಪ ವೃತ್ತಿಪರವಾಗಿ ಮಾಡುವ ಯೋಚನೆ ಇದೆ. ಅದಕ್ಕಾಗಿ ಒಂದು ಎಡಿಟಿಂಗ್ ಸ್ಟುಡಿಯೋ ಆರಂಭಿಸುತ್ತಿದ್ದೇನೆ. ಆಸಕ್ತರಿಗೆ ತರಬೇತಿ ನೀಡಬೇಕು ಎಂದು ಯೋಚಿಸುತ್ತಿದ್ದೇನೆ.

■ ರಾಘವೇಂದ್ರ